ಸಿ. ಸಿ. ನಂ. **1339/2021**

ಪಿ ಡಬ್ಲ್ಯೂಃ **1**

**ಸಾಕ್ಷಿಯು ದಿನಾಂಕಃ 28-08-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಡಿ ಪಿ., ವಕೀಲರಿಂದ**

ಆರೋಪಿಯ ಮನೆ ನನ್ನ ನಿವೇಶನದ ಪಕ್ಕದಲ್ಲಿರುವುದರಿಂದ ಆತನ ಪರಿಚಯ ಇರುತ್ತದೆ. ಸುಮಾರು **8-10** ವರ್ಷಗಳಿಂದ ಆರೋಪಿಯ ಪರಿಚಯ ಇರುತ್ತದೆ. ಆರೋಪಿಗೆ ಹಣವನ್ನು ಬ್ಯಾಂಕ್ ಖಾತೆಯ ಮೂಲಕ ವರ್ಗಾವಣೆ ಮಾಡಿರುತ್ತೇನೆ. ನನ್ನ ಮತ್ತು ಆರೋಪಿಯ ಮಧ್ಯೆದ ವ್ಯವಹಾರಕ್ಕೆ ಸಂಬಂಧಿಸಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಅಥವಾ ಪಾಸ್ ಬುಕ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

ನಾನು ಮೈನಿಂಗ್ ಇಂಜಿನಿಯರ್ ಇದ್ದು, ಕನ್ಸಲಟೆನ್ಸಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಇಂಜಿನಿಯರ್ ಇರುವ ಬಗ್ಗೆ ನನ್ನ ವೃತ್ತಿಗೆ ಸಂಬಂಧಿಸಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನಾನು ಮಾಸಿಕ ಸಂಬಳ ರೂ. **80,000/-** ಗಳಷ್ಟು ಪಡೆಯುತ್ತೇನೆ. ನನಗೆ ಕೆಲಸ ಹೆಚ್ಚಿಗೆ ಇದ್ದಾಗ ಮಾತ್ರ ಆ ರೀತಿ ರೂ. **80,000/-** ಗಳಷ್ಟು ಆದಾಯ ಬರುತ್ತದೆ ಅಂದರೆ ಸರಿ. ಬೇರೆ ಸಮಯದಲ್ಲಿ ಅಷ್ಟೊಂದು ಆದಾಯ ಇರುವುದಿಲ್ಲ ಅಂದರೆ ಸರಿಯಲ್ಲ. ನನಗೆ ರೂ. **11,00,000/-** ಗಳಷ್ಟು ಸಾಲವಾಗಿ ಕೊಡಲು ಶಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ.

ವಿಶ್ವನಾಥ ಬಯೋಲ್ ನನ್ನೊಂದಿಗೆ ಪಾಲುದಾರ ಇರುತ್ತಾನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಸ್ನೇಹಿತನಿರುತ್ತಾನೆ ಎಂದು ನುಡಿಯುತ್ತಾರೆ.

ಸಿ. ಸಿ. ನಂ. **1339/2021**

ಪಿ ಡಬ್ಲ್ಯೂ: **1**

ನಾನು ಮತ್ತು ವಿಶ್ವನಾಥ ಬಯೋಲ್ ರವರು ಬೆಂಗಳೂರಿನಲ್ಲಿ ಒಂದು ನಿವೇಶನವನ್ನು ಮಾರಾಟ ಮಾಡಿದ್ದೇವು ಅಂದರೆ ಸರಿ. ಸದರಿ ವ್ಯವಹಾರಕ್ಕೆ ಸಂಬಂಧಿಸಿ ದಿಃ **21-08-2020** ರಂದು ಕರಾರು ಪತ್ರ ಆಗಿತ್ತು ಅಂದರೆ ಸರಿ. ಸದರಿ ಕರಾರು ಪತ್ರ ರೂ. **72,00,000/-** ಗಳ ಮೊತ್ತಕ್ಕೆ ಇತ್ತು ಅಂದರೆ ಸರಿ. ಸದರಿ ಕರಾರು ಪತ್ರದಲ್ಲಿ ನಿವೇಶನವನ್ನು ಆರೋಪಿಗೆ ಮಾರಾಟ ಮಾಡಲಾಗಿದೆ ಅಂದರೆ ಸರಿ. ಸದರಿ ವ್ಯವಹಾರಕ್ಕೆ ಸಂಬಂಧಿಸಿದ ಹಣವನ್ನು ಆರೋಪಿಯಿಂದ ನಾನು ಮತ್ತು ವಿಶ್ವನಾಥ ಬಯೋಲ್ ಹಂತ ಹಂತವಾಗಿ ಪಡೆದಿರುತ್ತೇವೆ ಅಂದರೆ ಸರಿ. ನಾನು ಸದರಿ ವ್ಯವಹಾರ  ಆದಾಗ ಭದ್ರತೆಗಾಗಿ ಚೆಕ್ ಮತ್ತು ಪ್ರಾಮಿಸರಿ ನೋಟ್ ನ್ನು ಆರೋಪಿಯಿಂದ ಪಡೆದಿದ್ದೆ ಅಂದರೆ ಸರಿ. ಸಾಕ್ಷಿ ಮುಂದುವರೆದು, ರೂ. **11,00,000/-** ಕೊಟ್ಟು ಪಡೆದಿರುತ್ತೇನೆ.

ವಿಶ್ವನಾಥ ಬಯೋಲ್ ರವರು ಆರೋಪಿಯ ಹೆಂಡತಿ ಸ್ಮಿತಾ ಜೆ ಕೆ ರವರ ವಿರುದ್ಧ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೊಸಪೇಟೆಯಲ್ಲಿ ರೂ. **11,00,000/-** ಗಳಿಗೆ ಚೆಕ್ ಬೌನ್ಸ ಪ್ರಕರಣ ದಾಖಲಿಸಿರುತ್ತಾರೆ ಅಂದರೆ ಸರಿ. ಸದರಿ ಪ್ರಕರಣ ಸಿಸಿ ನಂ. **265/2021** ರಲ್ಲಿ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ವಿಶ್ವನಾಥ ಬಯೋಲ್ ರವರು ಖರೀದಿ ವ್ಯವಹಾರದ ಭದ್ರತೆಗಾಗಿ ಪಡೆದಿದ್ದ ಪ್ರಾಮಿಸರಿ ನೋಟ್ ಮತ್ತು ಚೆಕ್ ಗಳನ್ನು ದುರುಪರೋಗಪಡಿಸಿಕೊಂಡು ಆರೋಪಿ ಮತ್ತು ಆತನ ಹೆಂಡತಿ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ.

ಆರೋಪಿ ಅಸಲು ದಾವೆ ಸಂಖ್ಯೆಃ **26143/2020** ರಲ್ಲಿ ನನ್ನ ಮತ್ತು ವಿಶ್ವನಾಥ ಬಯೋಲ್ ರವರ ವಿರುದ್ಧ ದಾವೆ ಸಲ್ಲಿಸಿದ್ದರು ಅಂದರೆ ಸರಿ. ಸಾಕ್ಷಿ ಮುಂದುವರೆದು, ದಾವೆ ವಜಾ ಆಗಿದೆ ಎಂದು ನುಡಿಯುತ್ತಾರೆ.

ಸದರಿ ಪ್ರಕರಣ ವಜಾ ಆಗಿಲ್ಲ, ಇನ್ನೂ ಬಾಕಿ ಇದೆ ಅಂದರೆ ಸರಿಯಲ್ಲ. ಆರೋಪಿ ಇಲ್ಲಿಯವರೆಗೂ ನಿವೇಶನದ ಸ್ವಾಧೀನವನ್ನು ಪಡೆದಿಲ್ಲ ಅಂದರೆ ಸರಿಯಲ್ಲ. ಆರೋಪಿಗೆ ವ್ಯವಹಾರದ ಪ್ರಕಾರ ನಿವೇಶನದ ಸ್ವಾಧೀನವನ್ನು ಸಹ ನಾನು ಬಿಟ್ಟುಕೊಟ್ಟಿಲ್ಲ ಅಂದರೆ ಸರಿಯಲ್ಲ.

ನಾನು ಆರೋಪಿಗೆ ನೀಡಿದ್ದ ನೋಟಿಸ್ ಗೆ ಆರೋಪಿ ತನ್ನ ವಕೀಲರ ಮೂಲಕ ಉತ್ತರ ನೀಡಿದ್ದ ಅಂದರೆ ಸರಿ. ಸದರಿ ಉತ್ತರ ನೋಟಿಸ್ ಜಾರಿಯಾದ ನಂತರ ನಾನು ಆರೋಪಿಯನ್ನು ಸಂಪರ್ಕಿಸಿಲ್ಲ ಮತ್ತು ಭೇಟಿಯಾಗಿಲ್ಲ. ವ್ಯವಹಾರ ಆದ ನಿವೇಶನದ ಅಳತೆ ಕಡಿಮೆ ಇದ್ದದ್ದರಿಂದ ನಮಗೂ ಮತ್ತು ಆರೋಪಿಗೂ ವ್ಯತ್ಯಾಸಗಳು ಉಂಟಾಗಿ ವೈಶಮ್ಯ ಬೆಳೆದಿತ್ತು ಅಂದರೆ ಸರಿಯಲ್ಲ. ಆದ್ದರಿಂದ, ಆರೋಪಿ ಭದ್ರತೆಗಾಗಿ ನೀಡಿದ್ದ ಪ್ರಾಮಿಸರಿ ನೋಟ್ ಮತ್ತು ಚೆಕ್ ನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.